ಕರ್ನಾಟಕ ಸರ್ಕಾರ

ರೇಷ್ಮೆ ಇಲಾಖೆ

# ಚಾಕಿ ಮತ್ತು ಪ್ರೌಢ ರೇಷ್ಮೆಹುಳುಗಳ ಸಾಕಾಣಿಕೆ ವಿವರಗಳು

ಪ್ರಚಾರ ಸಾಹಿತ್ಯ–8ಎ





## ಪಟ್ಟಿ–1 60000 ಹುಳುಗಳ (100 ರೋಗರಹಿತ ಮೊಟ್ಟೆಗಳ) ಚಾಕಿ ಹುಳು ಸಾಕಣೆಯ ವಿವರ

| ಹುಳುವಿನ ಹಂತ | ಹಂತ (ದಿನಗಳು) | ಸೊಪ್ಪು ನೀಡುವ ಸಮಯ (ಗಂಟೆ) | ಸೊಪ್ಪಿನ ಗಾತ್ರ (ಸೆಂ.ಮೀ.ಗಳಲ್ಲಿ) | ಸೊಪ್ಪಿನ ಪ್ರಮಾಣ (ಗ್ರಾಂ.ಗಳಲ್ಲಿ) | ಹುಳುವಿನ ಹಾಸಿಗೆ ವಿಸ್ತೀರ್ಣ(ಚ.ಅ.) | ಷರಾ |
|---|---|---|---|---|---|---|
| | 1 | ಬೆ. 10.00<br>ಸಾ. 4.00<br>ರಾ. 10.00 | ಸಣ್ಣದಾಗಿ ಕತ್ತರಿಸಿದ<br>0.5 x 0.5<br>0.5 x 0.5 | 500 | 4<br>7.5 | ಕಪ್ಪು ಪೆಟ್ಟಿಗೆ ಉಪಚರಿಸಿದ ಮೊಟ್ಟೆಗಳನ್ನು ಬೆಳಿಗ್ಗೆ ಸುಮಾರು 8.00 ಗಂಟೆಗೆ ಬೆಳಕಿಗೆ ಒಡ್ಡಬೇಕು. ಕತ್ತರಿಸಿದ ತಾಜಾ ಹಾಗೂ ಎಳಸು ಸೊಪ್ಪನ್ನು ಉಪಯೋಗಿಸಿ ಹುಳುಗಳನ್ನು ಮೇಣದ ಪೇಪರ್ ಮೇಲೆ ಒಂದು ಗಂಟೆಯ ನಂತರ ಚಾಕಿ ಕಟ್ಟಿ, ಹಾಸಿಗೆ ಸಿದ್ಧಪಡಿಸಿ, ಸೊಪ್ಪು ಕೊಡಬೇಕು. |
| 1ನೆ ಹಂತ<br>27–28$^{0}$ಸೆ.<br>ಶೇ.85–90<br>ಶೈತ್ಯಾಂಶ | 2 | ಬೆ. 5.00<br>ಬೆ. 10.00<br>ಸಾ. 4.00<br>ರಾ. 10.00 | 1.0 x 1.0<br>1.0 x 1.0<br>1.5 x 1.5<br>1.5 x 1.5 | 1,800 | 7.5<br>10.5 | ಸೊಪ್ಪು ನೀಡುವ ಅರ್ಧ ತಾಸು ಮೊದಲು ಹಾಸಿಗೆಯನ್ನು ಹರಡಿ ಒಣಗಿಸಬೇಕು. |
| | 3 | ಬೆ. 5.00<br>ಬೆ. 10.00 | 1.5 x 1.5<br>1.5 x 1.5 | | 10.5 | ಸೊಪ್ಪು ನೀಡುವ ಅರ್ಧ ತಾಸು ಮೊದಲು ಹಾಸಿಗೆಯನ್ನು ಹರಡಿ ಒಣಗಿಸಬೇಕು. ಜ್ವರಕ್ಕೆ ಕೂರುವ ಪ್ರಕ್ರಿಯೆಯನ್ನು ಗಮನಿಸು– |

| | | | | | | |
|---|---|---|---|---|---|---|
| | | ಸಾ. 4.00<br>ರಾ. 10.00 | 0.5 x 0.5<br>0.5 x 0.5 | 1,200 | 15.0 | ತ್ತಿರಬೇಕು. ಜ್ವರಕ್ಕೆ ಹೋಗುವ ಸೂಚನೆ ಕಂಡು ಬಂದಲ್ಲಿ ಸೊಪ್ಪಿನ ಗಾತ್ರ ಹಾಗೂ ಪ್ರಮಾಣವನ್ನು ಸೂಕ್ತವಾಗಿ ಕಡಿಮೆ ಮಾಡಬೇಕು. |
| 1ನೆ ಜ್ವರ<br>26–27$^{0}$ಸೆ.<br>ಶೈತ್ಯಾಂಶ<br>ಶೇ. 75 | 4 | ಬೆ. 5.00 | 0.5 x 0.5 | 200 | 15.0 | ಅವಶ್ಯಕತೆಯಿದ್ದಲ್ಲಿ ಅಲ್ಪ ಪ್ರಮಾಣದಲ್ಲಿ ಸೊಪ್ಪನ್ನು ಕೊಡಬೇಕು. ಶೇ. 90ಕ್ಕಿಂತ ಹೆಚ್ಚು ಹುಳುಗಳು ಜ್ವರಕ್ಕೆ ಕುಳಿತಾಗ, ಸೊಪ್ಪು ಕೊಡುವುದನ್ನು ನಿಲ್ಲಿಸಬೇಕು. ಹುಳು ಹಾಸಿಗೆಯನ್ನು ಹರಡಿ ತಾಜಾ ಸಕ್ರಿಯ ಸುಣ್ಣದ ಪುಡಿಯನ್ನು ಸಿಂಪಡಿಸಬೇಕು. ಹುಳು ಹಾಸಿಗೆ ಒಣಗಲು ಅವಕಾಶ ಕಲ್ಪಿಸಬೇಕು. |
| 2ನೆ ಹಂತ<br>26–27$^{0}$ಸೆ.<br>ಶೇ.85–90<br>ಶೈತ್ಯಾಂಶ | 5 | ಬೆ. 5.00<br>ಬೆ. 10.00<br>ಸಾ. 4.00<br>ರಾ. 10.00 | 1.5 x1.5<br>1.5 x1.5<br>1.5 x 1.5<br>2 x 2 | 3,500 | 15.0<br><br><br>30.0 | ಶೇಕಡಾ 90ಕ್ಕಿಂತ ಹೆಚ್ಚು ಹುಳುಗಳು ಜ್ವರದಿಂದ ಹೊರಬಂದ ನಂತರ ಸೊಪ್ಪನ್ನು ನೀಡಬೇಕು. ಸೊಪ್ಪು ಕೊಡುವುದಕ್ಕಿಂತ ಮೊದಲು ಹಾಸಿಗೆ ಸೋಂಕು ನಿವಾರಕವನ್ನು ಧೂಳೀಕರಿಸಬೇಕು. ಹಾಸಿಗೆಯನ್ನು ಸೋಂಕು ನಿವಾರಣೆ ಮಾಡಬೇಕು. ಬಲೆಯನ್ನು ಉಪಯೋಗಿಸಿ ಹುಳುವಿನ ಹಾಸಿಗೆಯನ್ನು ಸ್ವಚ್ಛಗೊಳಿಸಬೇಕು. |

| | | | | | | |
|---|---|---|---|---|---|---|
| | 6 | ಬೆ. 5.00<br>ಬೆ. 10.00<br>ಸಾ. 4.00<br>ರಾ. 10.00 | 2 x 2<br>2 x 2<br>2 x 2<br>2 x 2 | 4,250 | 30.0<br>45.0 | ಸೊಪ್ಪು ಕೊಡುವ ಅರ್ಧ ತಾಸು ಮೊದಲು ಹಾಸಿಗೆಯನ್ನು ವಿಸ್ತರಿಸಿ ಒಣಗಿಸಬೇಕು |
| 2ನೆ ಜ್ವರ<br>26–27°ಸೆ.<br>ತೃತ್ಯಾಂಶ<br>ಶೇ. 75 | 7 | ಬೆ. 5.00<br>ಬೆ. 10.00 | 2 x 2<br>1 x 1 | 1,100 | 45.0 | ಜ್ವರಕ್ಕೆ ಕೂರುವುದನ್ನು ಗಮನಿಸಬೇಕು. ಜ್ವರಕ್ಕೆ ಹೋಗುವ ಸೂಚನೆ ಕಂಡುಬಂದಲ್ಲಿ, ಸೊಪ್ಪಿನ ಪ್ರಮಾಣ ಹಾಗೂ ಗಾತ್ರವನ್ನು ಸೂಕ್ತವಾಗಿ ಕಡಿಮೆ ಮಾಡಬೇಕು. ಜ್ವರಕ್ಕೆ ಹೋಗುವ ಮುನ್ನ ಹುಳು ಹಾಸಿಗೆ ಸ್ವಚ್ಛಗೊಳಿಸಬೇಕು. ಶೇಕಡ 90ಕ್ಕಿಂತ ಹೆಚ್ಚು ಹುಳುಗಳು ಜ್ವರಕ್ಕೆ ಕುಳಿತಾಗ ಸೊಪ್ಪು ಕೊಡುವುದನ್ನು ನಿಲ್ಲಿಸಬೇಕು. ಹುಳುವಿನ ಹಾಸಿಗೆಯನ್ನು ಸಾವಕಾಶವಾಗಿ ಹರಡಿ, ತಾಜಾ ಸಕ್ರಿಯ ಸುಣ್ಣದ ಪುಡಿಯನ್ನು ತೆಳುವಾಗಿ ಧೂಳೀಕರಿಸಬೇಕು. ಹುಳು ಹಾಸಿಗೆ ಒಣಗಲು ಅವಕಾಶಕಲ್ಪಿಸಬೇಕು. ಹುಳು ಜ್ವರಕ್ಕೆ ಹೋದಾಗ, ದಡೇವಿನಲ್ಲಿ ತಟ್ಟೆಗಳನ್ನಿಡಬೇಕು. |
| 3ನೆ ಹಂತ<br>25–26°ಸೆ. | 8 | ಸಾ. 4.00<br>ರಾ. 10.00 | 2 x 2<br>3 x 3 | 3,300 | 45.0 | ಶೇ. 90ಕ್ಕಿಂತ ಹೆಚ್ಚು ಹುಳುಗಳು ಜ್ವರದಿಂದ ಹೊರಬಂದ ನಂತರ, ಹುಳು ಮತ್ತು ಹುಳುವಿನ ಹಾಸಿಗೆಯನ್ನು ಹಾಸಿಗೆ ಸೋಂಕು |

| | | | | | | |
|---|---|---|---|---|---|---|
| ಶೇ. 75–90 ಶೈತ್ಯಾಂಶ | | | | | | ನಿವಾರಕಗಳಿಂದ ಸೋಂಕು ನಿವಾರಣೆ ಮಾಡಿ ಸೊಪ್ಪು ನೀಡಬೇಕು. ಬಲೆಯನ್ನು ಉಪಯೋಗಿಸಿ ಹುಳುವಿನ ಹಾಸಿಗೆಯನ್ನು ಸ್ವಚ್ಛಗೊಳಿಸಬೇಕು. ದಿನದ ತಂಪು ಹೊತ್ತಿನಲ್ಲಿ ಸುಣ್ಣ ಧೂಳೀಕರಿಸಿದ ನಂತರ ಚಾಕಿ ಹುಳುಗಳ ವಿತರಣೆ ಮಾಡಬೇಕು. |
| | 9 | ಬೆ. 5.00<br>ಬೆ. 10.00<br>ಸಾ. 4.00<br>ರಾ. 10.00 | 3 x 3<br>3 x 3<br>3 x 3<br>3 x 3 | 9,000 | 45.0<br>60.0 | ಸೊಪ್ಪು ಕೊಡುವ ಅರ್ಧ ತಾಸು ಮೊದಲು ಹಾಸಿಗೆಯನ್ನು ಹರಡಿ ಒಣಗಿಸಬೇಕು. ಹುಳು ಹಾಸಿಗೆ ಸ್ವಚ್ಛಗೊಳಿಸಿ ಸೊಪ್ಪು ನೀಡಬೇಕು. |
| | 10 | ಬೆ. 5.00<br>ಬೆ. 10.00<br>ಸಾ. 4.00<br>ರಾ. 10.00 | 4 x 4<br>4 x 4<br>4 x 4<br>4 x 4 | 12,000 | 60.0<br>90.0 | ಸೊಪ್ಪು ಕೊಡುವ ಅರ್ಧ ತಾಸು ಮೊದಲು ಹುಳುವಿನ ಹಾಸಿಗೆಯನ್ನು ಹರಡಿ ಒಣಗಿಸಬೇಕು. ಹುಳು ಹಾಸಿಗೆ ಸ್ವಚ್ಛಗೊಳಿಸಿ ಸೊಪ್ಪು ನೀಡಬೇಕು. |
| | 11 | ಬೆ. 5.00<br>ಬೆ. 10.00 | 4 x 4<br>4 x 4 | | 90.0 | ಬಲೆಯನ್ನು ಉಪಯೋಗಿಸಿ ಹುಳುವಿನ ಹಾಸಿಗೆಯನ್ನು ಸ್ವಚ್ಛಗೊಳಿಸಬೇಕು. ಜ್ವರಕ್ಕೆ ಹೋಗುವ ಸೂಚನೆ |

| | | | | | | |
|---|---|---|---|---|---|---|
| | | ಸಾ. 4.00<br>ರಾ. 10.00 | 2 x 2<br>2 x 2 | 8,000 | | ಕಂಡುಬಂದಲ್ಲಿ ಸೊಪ್ಪಿನ ಗಾತ್ರ ಹಾಗೂ ಪ್ರಮಾಣವನ್ನು ಸೂಕ್ತವಾಗಿ ಕಡಿಮೆ ಮಾಡಬೇಕು. |
| 3ನೆ ಜ್ವರ<br>25° ಸೆ.<br>ಶೇ. 75<br>ಶೈತ್ಯಾಂಶ | 12 | ಬೆ. 5.00 | | | 90.0<br><br>90.0 | ಶೇ. 90ಕ್ಕಿಂತ ಹೆಚ್ಚು ಹುಳುಗಳು ಜ್ವರಕ್ಕೆ ಕುಳಿತಾಗ ಸೊಪ್ಪು ಕೊಡುವುದನ್ನು ನಿಲ್ಲಿಸಬೇಕು. ಹುಳು ಹಾಸಿಗೆಯನ್ನು ಸಾವಕಾಶವಾಗಿ ಹರಡಿ ತಾಜಾ ಸಕ್ರಿಯ ಸುಣ್ಣದ ಪುಡಿಯನ್ನು ಧೂಳೀಕರಿಸಬೇಕು. ಹುಳು ಹಾಸಿಗೆ ಒಣಗಲು ಅವಕಾಶ ಕಲ್ಪಿಸಬೇಕು. |

## ಪಟ್ಟಿ–2: ಪ್ರೌಢ ಹುಳುಗಳನ್ನು ರೆಂಬೆ ಪದ್ಧತಿಯಲ್ಲಿ ಸಾಕಣೆ ಮಾಡುವ ವಿವರ (100 ಮೊಟ್ಟೆ – 60,000 ಹುಳುಗಳು)

| ಹುಳುವಿನ ಹಂತ | ಹಂತ (ದಿನಗಳು) | ಸೊಪ್ಪು ನೀಡುವ ಸಮಯ (ಗಂಟೆ) | * ಕೊಡಬೇಕಾದ ರೆಂಬೆಗಳ ಪ್ರಮಾಣ (ಕಿ.ಗ್ರಾಂ.) | ಹುಳುವಿನ ಹಾಸಿಗೆ ವಿಸ್ತೀರ್ಣ (ಚ.ಅ.) | ಷರಾ |
|---|---|---|---|---|---|
| 4ನೆ ಹಂತ<br>22–25$^{0}$ ಸೆ.<br>ಶೈತ್ಯಾಂಶ<br>ಶೇ. 70–75 | 1 | ಬೆ. 8.00<br>ಮ. 3.00<br>ರಾ. 10.00 | 6<br>8<br>10 | 5' x 15' | ಮೂರನೆ ಜ್ವರದ ನಂತರ, ಹುಳುವಿನ ಹಾಸಿಗೆ ಸೋಂಕು ನಿವಾರಣೆ ಮಾಡಿ, ಬಲೆಯನ್ನು ಹುಳುಗಳ ಮೇಲೆ ಹರಡಿ ಕತ್ತರಿಸಿದ ಸೊಪ್ಪು ನೀಡಬೇಕು. ಹುಳುಗಳನ್ನು ಹಾಸಿಗೆಯಿಂದ ಬೇರ್ಪಡಿಸಿ ಸಾಕಾಣಿಕಾ ಮೇಜಿಗೆ ಸ್ಥಳಾಂತರಿಸಬೇಕು. ಹಾಸಿಗೆ ಸೋಂಕು ನಿವಾರಕವನ್ನು ಮೇಜಿನ ಮೇಲೆ ಸಿಂಪರಿಸಿ, ಹುಳುಗಳನ್ನು ಸ್ಥಳಾಂತರಿಸಿ ಸೊಪ್ಪನ್ನು ನೀಡಬೇಕು. |
| | 2 | ಬೆ. 8.00<br>ಮ. 3.00<br>ರಾ. 10.00 | 12<br>15<br>17 | 5' x 20' | ಸೊಪ್ಪು ನೀಡುವ ಮೊದಲು ಹಾಸಿಗೆಯನ್ನು ವಿಸ್ತರಿಸಬೇಕು. ತೇವಾಂಶ ಅಧಿಕವಾಗಿದ್ದಲ್ಲಿ ಸುಣ್ಣ ಧೂಳೀಕರಿಸುವುದು. |
| | 3 | ಬೆ. 8.00<br>ಮ. 3.00<br>ರಾ. 10.00 | 19<br>22<br>24 | 5' x 30' | ಸೊಪ್ಪು ನೀಡುವ ಮೊದಲು ಹಾಸಿಗೆಯನ್ನು ವಿಸ್ತರಿಸಬೇಕು. ತೇವಾಂಶ ಅಧಿಕವಾಗಿದ್ದಲ್ಲಿ ಸುಣ್ಣ ಧೂಳೀಕರಿಸುವುದು. |

| | | | | | |
|---|---|---|---|---|---|
| | 4 | ಬೆ. 8.00<br>ಮ. 3.00<br>ರಾ. 10.00<br>ಬೆ. 8.00 | 22<br>20<br>16<br>8 | 5' x 30' | ಹುಳುಗಳು ಜ್ವರಕ್ಕೆ ಕೂರುವ ಪ್ರಕ್ರಿಯೆಯನ್ನು ಗಮನಿಸುತ್ತಿರಬೇಕು. ಸೂಕ್ತ ರೀತಿಯಲ್ಲಿ ಸೊಪ್ಪನ್ನು ನೀಡಬೇಕು. (ತೆಳುವಾಗಿ ಸೊಪ್ಪು ನೀಡಬೇಕು). |
| 4ನೆ ಜ್ವರ | | | | 5' x 30' | ಶೇ. 90ಕ್ಕಿಂತ ಹೆಚ್ಚು ಹುಳುಗಳು ಜ್ವರಕ್ಕೆ ಕುಳಿತಾಗ ಸೊಪ್ಪು ಕೊಡುವುದನ್ನು ನಿಲ್ಲಿಸಬೇಕು. ತಾಜಾ ಸಕ್ರಿಯ ಸುಣ್ಣದ ಪುಡಿಯನ್ನು ಸಿಂಪರಿಸಬೇಕು. ಉತ್ತಮ ಗಾಳಿ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು. |
| 5ನೆ ಹಂತ | 1 | ರಾ. 10.00<br>ಬೆ. 8.00<br>ಮ. 3.00<br>ಬೆ. 8.00 | 16<br>19<br>22<br>26 | 5' x 30' | ಶೇ. 90ಕ್ಕಿಂತ ಹೆಚ್ಚು ಹುಳುಗಳು ಜ್ವರದಿಂದ ಹೊರಬಂದ ನಂತರ ಹಾಸಿಗೆ ಸೋಂಕು ನಿವಾರಕವನ್ನು ಧೂಳೀಕರಿಸಿ ಅರ್ಧ ಗಂಟೆಯ ನಂತರ ಸೊಪ್ಪು ನೀಡುವುದು. **2–3 ಸೊಪ್ಪು ನೀಡಿದ ನಂತರ ಹಾಸಿಗೆ ಬದಲಾಯಿಸುವುದು. ನಂತರ ಹಾಸಿಗೆ ಸೋಂಕು ನಿವಾರಣೆ ಮಾಡುವುದು. |
| | 2 | ಬೆ. 8.00<br>ಮ. 3.00<br>ರಾ. 10.00 | 30<br>34<br>38 | 5' x 35' | ಸೊಪ್ಪು ನೀಡುವ ಮೊದಲು ಹಾಸಿಗೆಯನ್ನು ವಿಸ್ತರಿಸಬೇಕು. ತೇವಾಂಶ ಅಧಿಕವಾಗಿದ್ದಲ್ಲಿ ಸುಣ್ಣ ಧೂಳೀಕರಿಸುವುದು. |
| | 3 | ಬೆ. 8.00<br>ಮ. 3.00<br>ರಾ. 10.00 | 42<br>46<br>48 | 5' x 55' | ಸೊಪ್ಪು ನೀಡುವ ಮೊದಲು ಹಾಸಿಗೆಯನ್ನು ವಿಸ್ತರಿಸಬೇಕು. ತೇವಾಂಶ ಅಧಿಕವಾಗಿದ್ದಲ್ಲಿ ಸುಣ್ಣ ಧೂಳೀಕರಿಸುವುದು. |

| | | | | | |
|---|---|---|---|---|---|
| 22–25°ಸೆ.<br>ಶೇ. 70–75<br>ಶೈತ್ಯಾಂಶ | 4 | ಬೆ. 8.00<br>ಮ. 3.00<br>ರಾ. 10.00 | 50<br>54<br>60 | 5' x 60' | ಹಾಸಿಗೆಯನ್ನು ವಿಸ್ತರಿಸಿ ಹುಳುಗಳ ಆರೋಗ್ಯವನ್ನು ಗಮನಿಸುವುದು. |
| | 5 | ಬೆ. 8.00<br>ಮ. 3.00<br>ರಾ. 10.00 | 62<br>66<br>72 | 5' x 70' | ಹಾಸಿಗೆಯನ್ನು ವಿಸ್ತರಿಸಿ ಹಾಸಿಗೆ ಸೋಂಕು ನಿವಾರಣೆ ಮಾಡುವುದು ಮತ್ತು ರೂಢಿಯಂತೆ ಸೊಪ್ಪು ನೀಡುವುದು |
| | 6 | ಬೆ. 8.00<br>ಮ. 3.00<br>ರಾ. 10.00 | 76<br>78<br>80 | 5' x 70' | ಸೊಪ್ಪು ನೀಡಬೇಕು. |
| | 7 | ಬೆ. 8.00<br>ಮ. 3.00<br>ರಾ. 10.00 | 82<br>82<br>70 | 5' x 70' | ಸೊಪ್ಪು ನೀಡಬೇಕು. ಅಗತ್ಯವಿದ್ದಲ್ಲಿ ಹಾಸಿಗೆಯನ್ನು ಸೋಂಕು ನಿವಾರಕಗೊಳಿಸಬೇಕು. |
| 24–25°ಸೆ.<br>ಶೇ. 60–65<br>ಶೈತ್ಯಾಂಶ | 8 | ಬೆ. 8.00<br>ಮ. 3.00<br>ರಾ. 10.00 | 65<br>50<br>40 | | ಹುಳುಗಳು ಹಣ್ಣಾಗುವುದನ್ನು ಗಮನಿಸಬೇಕು. ಚಂದ್ರಿಕೆಗಳ ಮೇಲೆ ಪ್ರತಿ ಚ.ಅ.ಗೆ 40–45 ಹಣ್ಣು ಹುಳುಗಳನ್ನು ಗೂಡು ಕಟ್ಟಲು ಬಿಡಬೇಕು. |

**ಸೂಚನೆ:** * ಅಂದಾಜು 60–70 ದಿನ ಬೆಳೆದ (ಕಟಾವಿನಿಂದ ಕಟಾವಿಗೆ) ಸುಮಾರು ಶೇ. 60ರಷ್ಟು ಸೊಪ್ಪು ಮತ್ತು ಶೇ. 40ರಷ್ಟು ರೆಂಬೆಯ ತೂಕ ಇರುವ. * ದ್ವಿತಳಿ ರೇಷ್ಮೆ ಹುಳುಗಳಿಗೆ ಅಂದಾಜು ಶೇ. 10ರಷ್ಟು ಹೆಚ್ಚು ಸೊಪ್ಪನ್ನು ನೀಡಬೇಕು. **ಹಾಸಿಗೆಯ ಕಸವನ್ನು ತೆಗೆಯಲು ಬಲೆ (2" x 2") ಅಥವಾ 5'–6' ಉದ್ದ 2–3 ಹಗ್ಗಗಳನ್ನು ಒಂದು ಕೋಲಿಗೆ ಕಟ್ಟಿ ಹಾಸಿಗೆಯ ಮೇಲೆ ಹರಡಿ, 2–3 ಬಾರಿ ಸೊಪ್ಪು ನೀಡಿದ ಬಳಿಕ ಬಲೆ/ಹಗ್ಗವನ್ನು ಮೇಲಕ್ಕೆತ್ತಿ ಹೊಸ ಹಾಸಿಗೆಯನ್ನು ಹಳೆ ಹಾಸಿಗೆಯಿಂದ ಬೇರ್ಪಡಿಸಿ, ಕಸ ತೆಗೆದು, ಸೋಂಕು ನಿವಾರಿಸಬೇಕು.

## ಪಟ್ಟಿ–3: ಪ್ರೌಢ ಹುಳು ಸಾಕಣೆ ಮಾಡಲು ಬೇಕಾಗುವ ಸ್ಥಳಾವಕಾಶ ಮತ್ತು ಸೊಪ್ಪು (100 ಮೊಟ್ಟೆ–60,000 ಹುಳುಗಳು)

| ಹುಳುವಿನ ಹಂತ | ಉಷ್ಣಾಂಶ (°ಸೆ.) | ಶೈತ್ಯಾಂಶ (ಶೇಕಡ) | ಸೊಪ್ಪಿನ ಗುಣಮಟ್ಟ | ಪ್ರತಿ ದಿನದಲ್ಲಿ ಸೊಪ್ಪು ನೀಡುವ ಸಂಖ್ಯೆ | 100 ರೋಗ ರಹಿತ ಮೊಟ್ಟೆಗಳಿಗೆ ಸ್ಥಳಾವಕಾಶ (ಚ.ಅಡಿ) | | 100 ರೋಗ ರಹಿತ ಮೊಟ್ಟೆಗಳಿಗೆ ಸೊಪ್ಪಿನ ಪ್ರಮಾಣ (ಕಿ.ಗ್ರಾಂ.) | |
|---|---|---|---|---|---|---|---|---|
| | | | | | ದ್ವಿತಳಿ | ಮಿಶ್ರತಳಿ | ದ್ವಿತಳಿ | ಮಿಶ್ರತಳಿ |
| 4ನೇ ಹಂತ | 25–26 | 70–75 | ಮಧ್ಯಮ | 3–4 | 15–30 (ತಟ್ಟೆಗಳು) (180–575) | 15–25 (ತಟ್ಟೆಗಳು) (180–470) | 195<br>250 | 160<br>250 |
| 5ನೇ ಹಂತ | 24–25 | 70–75 | ಮಧ್ಯಮ ಮತ್ತು ಬಲಿಕೆ | 3–4 | 30–60 (ತಟ್ಟೆಗಳು) (575–1000) | 25–50 (ತಟ್ಟೆಗಳು) (470–900) | 1120<br>1650 | 960<br>1500 |